683 (715) ಶ್ರೀ ಕೃಷ್ಣ ವಾಲೇಮಾರ್ ಜೆ (ಸುರತ್ಕಲ್) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಒಟ್ಟು ಮಂಜೂರಾದ ಸಿ–ದರ್ಜೆಯ ವಿವಿಧ ಹುದ್ದೆಗಳು ಎಷ್ಟು , ಅವುಗಳಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳು ಎಷ್ಟು ,

ಆ) ಮಂಜೂರಾಗಿರುವ ಕೃಷಿ ಸಹಾಯಕರ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು , ಅವುಗಳನ್ನು ಯಾವಾಗ ತುಂಬಲಾಗುವುದು ,

ಇ) ರೈತರಿಗೆ ನೇರವಾಗಿ ನೆರವಾಗುವ ಎಲ್ಲಾ ಖಾಲಿ ಹುದ್ದೆಗಳನ್ನು ತ್ವರಿತಗತಿಯಲ್ಲಿ ತುಂಬುವ ಮೂಲಕ ಕೃಷಿ ಅಭಿವೃದ್ಧಿ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡಲು ಸರಕಾರ ಕ್ರಮ ಜರುಗಿಸುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಕೃಷಿ ಇಲಾಖೆ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳು 6497 ಖಾಲಿ ಇರುವ ಹುದ್ದೆಗಳು 1309

ಆ) 695 ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇರುತ್ತದೆ ಇಲಾಖೆಯ 2000ರ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಕೃಷಿ ಸಹಾಯಕರ ಹುದ್ದೆಗೆ ನೇರ ನೇಮಕಾತಿ ಸ್ಥಗಿತಗೊಳಿಸಲಾಗಿದೆ

ಇ) ಕೃಷಿ ಸಹಾಯಕರ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು

684 (716) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) – ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ತೋಟಗಾರಿಕೆಯಲ್ಲಿ ಮಿಷನ್ ವ್ಯಾಪ್ತಿಗೆ ಎಷ್ಟು ಜಿಲ್ಲೆಗಳನ್ನು ಒಳಪಡಿಸಲಾಗಿದೆ ,

ಆ) ಮಿಷನ್ ವ್ಯಾಪ್ತಿಗೆ ಒಳಪಡಿಸುವಲ್ಲಿ ಹೊಂದಿರಬೇಕಾದ ಮಾನದಂಡಗಳು ಯಾವುವು ,

ಇ) ಮಿಷನ್ ವ್ಯಾಪ್ತಿಗೆ ಯಾವ ಯಾವ ತೋಟಗಾರಿಕಾ ಬೆಳೆಗಳನ್ನು ಸೇರ್ಪಡೆ ಮಾಡಲಾಗಿದೆ ,

ಈ) 2005–06 ಹಾಗೂ 2006–07ನೇ ಸಾಲಿಗೆ ಮಂಜೂರಾದ ಹಣದ ಮೊತ್ತ ಎಷ್ಟು ,

ಉ) ಕೇಂದ್ರದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆಯೇ, ಅನುಷ್ಠಾನದ ವಿವರಗಳೇನು ?

ಶ್ರೀ ಶಶಿಕಾಂತ ಅಕ್ಕಪ್ಪನಾಯಕ (ತೋಟಗಾರಿಕೆ ಸಚಿವರು)

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ವ್ಯಾಪ್ತಿಗೆ 17 ಜಿಲ್ಲೆಗಳನ್ನು ಒಳಪಡಿಸಲಾಗಿದೆ

ಆ) ಮಿಷನ್ ವ್ಯಾಪ್ತಿಗೆ ಒಳಪಡಿಸುವಲ್ಲಿ ಹೊಂದಿರಬೇಕಾದ ಮಾನದಂಡಗಳು, ವಿವಿಧ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಇರತಕ್ಕ ವಿಫುಲ ಸಾಮರ್ಥ್ಯಗಳು, ವೈವಿಧ್ಯಮಯ ಹವಾಮಾನ, ಸಮೂಹ ದೃಷ್ಟಿಕೋನ ಹಾಗೂ ಪ್ರಾದೇಶಿಕ ಸಮತೋಲನತೆಯನ್ನು ಕಾಪಾಡುವ ಉದ್ದೇಶವನ್ನು ಆಧರಿಸಿದ ರಾಷ್ಟ್ರೀಯ ತೋಟಗಾರಿಕೆ ಮಿಷನ್, ನವದೆಹಲಿಯ ಮಾರ್ಗಸೂಚಿ

ಇ) ಮಿಷನ್ ವ್ಯಾಪ್ತಿಗೆ ಸೇರ್ಪಡೆಯಾಗಿರುವ ತೋಟಗಾರಿಕೆ ಬೆಳೆಗಳು ಇಂತಿವೆ ,

1 ಮಾವು
2 ಸಪೋಟ
3 ದ್ರಾಕ್ಷಿ
4 ದಾಳಿಂಬೆ
5 ಮೂಸಂಬಿ
6 ಅನಾನಸ್
7 ಬಾಳೆ
8 ಗೋಡಂಬಿ
9 ಕೋಕೋ
10 ಕಾಳುಮೆಣಸು
11 ಶುಂಠಿ
12 ಔಷಧಿ ಮತ್ತು ಸುಗಂಧಿತ ದ್ರವ್ಯ ಸಸ್ಯಗಳು
13 ಹೂವಿನ ಬೆಳೆಗಳು

ಈ) 2005–06 ಮತ್ತು 2006–07ನೇ ಸಾಲಿಗೆ ಮಂಜೂರಾದ ಹಣದ ಮೊತ್ತ ಇಂತಿದೆ

ರೂ ಕೋಟಿಗಳಲ್ಲಿ

ವರ್ಷ	ದಿನಾಂಕ	ಬಿಡುಗಡೆಯಾದ ಹಣ	ವಿನಿಯೋಗಿಸಿದ ಹಣ
2005–06	ಮಾರ್ಚ್ 2006	44 55	39 86
2006–07	26 6 2006	10 00	10 00
	10 01 2007	73 48	ಈ ಅನುದಾನವು ಇತ್ತೀಚೆಗೆ ವಿನಿಯೋಗಿಸಲಾಗುತ್ತಿದೆ

ಉ) ಹೌದು

ಅನುಷ್ಠಾನದ ವಿವರಗಳನ್ನು ಮೇಲಿನ (ಈ)ನಲ್ಲಿ ನೀಡಲಾದ ಉತ್ತರದಲ್ಲಿ ವಿವರಿಸಲಾಗಿದೆ

685 (717) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬಂಜರು ಭೂಮಿಯಲ್ಲಿ ಜೈವಿಕ ಇಂಧನ ಸಸ್ಯಗಳನ್ನು ಬೆಳೆಸುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ, ಹಾಗಿದ್ದಲ್ಲಿ ವಿವರಗಳೇನು ,

ಆ) ಸದರಿ ಯೋಜನೆಗಾಗಿ ಎಷ್ಟು ಹಣವನ್ನು ಕಳೆದ ಎರಡು ವರ್ಷಗಳಲ್ಲಿ ವಿನಿಯೋಗಿಸಲಾಗಿದೆ , ಜತ್ರೋಪ, ಹೊಂಗೆ, ಮತ್ತಿತರ ಇಂಧನ ಸಸ್ಯಗಳನ್ನು ರೈತರಿಗೆ ವಿತರಿಸುವ ಕಾರ್ಯಕ್ರಮದ ವಿವರಗಳೇನು ,,

ಇ) ಹಾಸನ ಜಿಲ್ಲೆಯಲ್ಲಿ ಜೈವಿಕ ಇಂಧನ ಪಾರ್ಕ್ ಸ್ಥಾಪನೆಯ ಕುರಿತು ಸರ್ಕಾರದ ಪ್ರಸ್ತಾವನೆಯು ಯಾವ ಹಂತದಲ್ಲಿದೆ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಹೌದು ರಾಜ್ಯದ ಎರಡು ಕೃಷಿ ವಿಶ್ವವಿದ್ಯಾನಿಲಯ ಹಾಗೂ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತಿನ ಸಹಯೋಗದೊಂದಿಗೆ ಜೈವಿಕ ಇಂಧನ ಸಸಿಗಳನ್ನು ಬೆಳೆಸಿ ಅದನ್ನು ರೈತರಿಗೆ ವಿತರಿಸಲಾಗುತ್ತಿದೆ

ಆ) ಕಳೆದ 2 ವರ್ಷಗಳಲ್ಲಿ ರೂ 325 00 ಲಕ್ಷಗಳನ್ನು ವಿನಿಯೋಗಿಸ ಲಾಗಿದೆ